# ಕೌಟುಂಬಿಕ ಸಾಮರಸ್ಯಕ್ಕೆ ಹಬ್ಬ ಹರಿದಿನಗಳ ಆವಶ್ಯಕತೆ

ವಿ. ಮೀನಾ



**ಭಾ**ರತದಲ್ಲಿ "ಅದ್ವೈತ ತತ್ತ್ವ" ಬಹಳವಾಗಿ ಮಾನ್ಯತೆ ಪಡೆದಿದೆ. ಇದರ ಮುಖ್ಯ ಗುರಿ ನಿರಾಕಾರ ಪರಬ್ರಹ್ಮದ ಸಾಕ್ಷಾತ್ಕಾರ. ಇದನ್ನು ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವುದು ಮತ್ತು ಅದರ ಪ್ರಕಾರ ಸಾಧನೆ ಮಾಡುವುದು ಬಹಳ ಕಷ್ಟವೆಂದೇ ಹೇಳಬೇಕು. ಜನರಿಗೆ ಅವ್ಯಕ್ತ ಉಪಾಸನೆ ಕಷ್ಟ. ಸಗುಣ ಸಾಕಾರ ಬ್ರಹ್ಮದ ಉಪಾಸನೆಯೇ ಸರ್ವರಿಗೂ ಸುಲಭವಾದದು, ಅನುಕರಣೀಯ ವಾದದು. ಸಾಕಾರ ಭಗವಂತನ ಉಪಾಸನೆಯಿಂದ ನಾವೆಲ್ಲ ನಿಜವಾದ ಸುಖ ಶಾಂತಿ ಹೊಂದಲು ಸಾಧ್ಯ. ಅದನ್ನು ಉದ್ದೇಶವಾಗಿ ಇಟ್ಟುಕೊಂಡೇ ಭಾರತದಲ್ಲಿ ಅನೇಕಾನೇಕ ಹಬ್ಬಹರಿದಿನಗಳು ವರ್ಷಪೂರ್ತಿ ನಡೆಯುತ್ತಿರುತ್ತವೆ. ಹಬ್ಬ ಹರಿದಿನ, ಉತ್ಸವಗಳ ಅವಶ್ಯಕತೆ ಬಹಳವಾಗಿಯೇ ಇದೆ. ಇದರ ಮೂಲಕ ಜನಸಾಮಾನ್ಯರಿಗೆ ಆಧ್ಯಾತ್ಮಿಕ ಭಾವನೆಗಳು ಕ್ರಮೇಣ ಅರ್ಥ ವಾಗುತ್ತವೆ. ಆದ್ದರಿಂದಲೇ ಹಿಂದೂಗಳು ಹಬ್ಬಗಳನ್ನು ಆಚರಿಸುತ್ತಾರೆ. ಇದರಿಂದ ಧರ್ಮದ ಉದಾತ್ತ ಭಾವಗಳು ಕ್ರಮೇಣ ಜನಸಾಮಾನ್ಯರಲ್ಲಿ ಪ್ರವೇಶ ಮಾಡುತ್ತವೆ. ಆ ಮೂಲಕ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರಜ್ಞೆ ಸಾಮಾನ್ಯ ಜನರಲ್ಲೂ ಉಂಟಾಗುತ್ತದೆ.

ಹಲವು ಕುಟುಂಬಗಳಲ್ಲಿ ಅನೇಕ ಜನರು ಒಟ್ಟಿಗೇ ಬಾಳುವುದು ಕಂಡುಬರುತ್ತದೆ. ಇಂದಿನ ಸಮಾಜದಲ್ಲಿ ಅವಿಭಕ್ತ ಕುಟುಂಬಗಳು ಹೆಚ್ಚಾಗಿ ಕಾಣುವುದಿಲ್ಲವಾದರೂ, ಸಾಧಾರಣವಾಗಿ ಒಂದು ಕುಟುಂಬದಲ್ಲಿ ಹಲವು ಸದಸ್ಯರು ಇರುತ್ತಾರೆ. ಅವರೆಲ್ಲರ ಸ್ವಭಾವಗಳೂ ಬಂದೇ ಆಗಿರಲು ಸಾಧ್ಯವಿಲ್ಲ. ಪ್ರತಿಯೊಬ್ಬ ಮನುಷ್ಯನಿಗೂ ಅವನವನ ಜನ್ಮಾಂತರದ ಸಂಸ್ಕಾರಗಳು ಇರುತ್ತವೆ. ಇಂಥ ಪರಿಸ್ಥಿತಿಯಲ್ಲಿ ಅವರೆಲ್ಲಾ ಒಟ್ಟಿಗೆ ಬಾಳುವಾಗ, ಘರ್ಷಣೆ, ಅಶಾಂತಿ, ಅಸುಖಗಳು ಉಂಟಾಗುವ ಸಂಭವ ಜಾಸ್ತಿ. ಅಂತಹ ನಕಾರಾತ್ಮಕ ವಾತಾವರಣವನ್ನು ಹೋಗಲಾಡಿಸಿ ಸಾಮರಸ್ಯ ಶಾಂತಿ ಬೆಳಸಲು ಹಬ್ಬ ಹರಿದಿನಗಳು ಅನೇಕ ವಿಧದಲ್ಲಿ ಸಹಾಯ ಮಾಡುತ್ತವೆ. ಕುಟುಂಬದ ಸದಸ್ಯರು ಬೇರೆ ಬೇರೆ ಉದ್ಯೋಗ, ಸ್ಥಾನಮಾನ ಉಳ್ಳವರಾದರೂ ಈ ಹಬ್ಬ ಹರಿದಿನಗಳನ್ನು ಆಚರಿಸುವಾಗ ಒಂದೇ ಭಾವನೆಯನ್ನು ಹೊಂದುತ್ತಾರೆ. ಇದರಿಂದ ಬಹಳಷ್ಟು ಸಾಮರಸ್ಯ ಉಂಟಾಗುತ್ತದೆ. ಉದಾಹರಣೆಗೆ ಗೌರಿ ವ್ರತ, ಗಣೇಶ ಪೂಜೆ, ದುರ್ಗಾಪೂಜೆ ಮುಂತಾದವನ್ನು ಅನೇಕ ವರ್ಷಗಳಿಂದ ಶ್ರದ್ಧೆ, ಭಕ್ತಿಗಳಿಂದ ಆಚರಿಸಿಕೊಂಡು ಬಂದವರ ಮನೆಗಳಲ್ಲಿ ಸಾಮರಸ್ಯವನ್ನೂ ಶಾಂತಿಯನ್ನೂ ಕಾಣಬಹುದು.

ಹಬ್ಬ ಹರಿದಿನಗಳ ಆಚರಣೆಯ ಮೂಲಕ, ಕುಟುಂಬಗಳು ನಮ್ಮ ಭವ್ಯ ಭಾರತೀಯ ಸಂಸ್ಕೃತಿಯನ್ನು ಕಾಪಾಡಿಕೊಂಡಂತೆಯೂ ಆಗುತ್ತದೆ. ಇಂದಿನ ಬದಲಾಗುತ್ತಿರುವ ಸಾಮಾಜಿಕ ಜೀವನದಲ್ಲಿ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಬರಲು ಅಸಮರ್ಥವಾದ ಕಾರಣದಿಂದಲೇ ಅನೇಕ ವಿದ್ಯಾವಂತರು ದೊಡ್ಡ ದೊಡ್ಡ ಸ್ಥಾನಗಳಲ್ಲಿ ಉದ್ಯೋಗ ಮಾಡುತ್ತಿದ್ದರೂ, ಸಣ್ಣ ಸೋಲನ್ನೂ ಸಹಿಸಲಾರದೆ ಆತ್ಮಹತ್ಯೆಗೆ ಒಳಗಾಗುತ್ತಿದ್ದಾರೆ. ಇದು ಅತ್ಯಂತ

ಕೌಟುಂಬಿಕ ಸಾಮರಸ್ಯದಲ್ಲಿ ಹಬ್ಬ ಹರಿದಿನಗಳ ಪಾತ್ರ ಅತ್ಯಂತ ಮಹತ್ವದ್ದು. ಇದರಿಂದ ಪರಸ್ಪರ ಸ್ನೇಹ, ವಿಶ್ವಾಸಗಳು ಬೆಳೆಯುತ್ತವೆ. ಎಲ್ಲರೂ ಒಟ್ಟುಗೂಡಿ ಆನಂದಪಡುವುದರಿಂದ, ಒಗ್ಗಟ್ಟಿನ ಭಾವನೆಯೂ ಬೆಳೆಯುತ್ತದೆ. ಹಾಗೆಯೇ ಹಬ್ಬಗಳು ಆಧ್ಯಾತ್ಮಿಕ ಮನೋಭಾವವನ್ನು ಬೆಳೆಸಲೂ ಸಹಾಯಕವಾಗುತ್ತವೆ. ಈ ಎಲ್ಲ ಅಂಶಗಳನ್ನು ವಿವರಿಸಿ ಹೇಳಿರುವ ಲೇಖಕಿ ಬೆಂಗಳೂರಿನ ರಾಮಕೃಷ್ಣ ಮಠದ ಭಕ್ತರು. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.